OCTOBER 21, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಪೊಲೀಸ್ ಸಂಸ್ಮರಣಾ ದಿನದ** ಅಂಗವಾಗಿ, ಇಂದು, ಬೆಂಗಳೂರಿನ, ಸಶಸ್ತ್ರ ಪೊಲೀಸ್ ಪಡೆ ಕೇಂದ್ರ ಸ್ಥಾನದಲ್ಲಿ ಆಯೋಜಿತ ಕಾರ್ಯಕ್ರಮದಲ್ಲಿ, ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಹುತಾತ್ಮ ಪೊಲೀಸ್ ಸಿಬ್ಬಂದಿಗೆ ಗೌರವ ನಮನ ಸಲ್ಲಿಸಿದರು. ನಾಡಿನ ಶಾಂತಿ, ನೆಮ್ಮದಿ, ಸುರಕ್ಷತೆಗಾಗಿ ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸಿ, ಪ್ರಾಣವನ್ನು ಅರ್ಪಿಸಿದ ವೀರ ಪೊಲೀಸ್ ಸಿಬ್ಬಂದಿಯ ಸೇವೆ, ಸಾಹಸ, ತ್ಯಾಗ ಸದಾ ಸ್ಮರಣೀಯ ಎಂದರು. ಗೃಹ ಖಾತೆ ಸಚಿವ ಪ್ರಿಯಾಂಕ ಖರ್ಗೆ, ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾಕ್ಟರ ಎಂ.ಎ ಸಲೀಂ ಪಾಲ್ಗೊಂಡಿದ್ದರು.

<><><>

**ಗೃಹ ಖಾತೆ ಸಚಿವ ಪ್ರಿಯಾಂಕ ಖರ್ಗೆ,** ಪೊಲೀಸ್ ಸಂಸ್ಮರಣ ದಿನದಂದು, ಕರ್ತವ್ಯದ ವೇಳೆ ತಮ್ಮ ಪ್ರಾಣವನ್ನು ಅರ್ಪಿಸಿದ, ಕರ್ನಾಟಕ ಪೊಲೀಸರ ತ್ಯಾಗವನ್ನು ಸ್ಮರಿಸಿಕೊಂಡಿದ್ದಾರೆ. ಗೌರವ ಪೂರ್ವಕ ನಮನಗಳನ್ನು ಸಲ್ಲಿಸಿದ್ದಾರೆ. ಸಾಮಾಜಿಕ ಜಾಲತಾಣ ಎಕ್ಸ್ ಖಾತೆಯಲ್ಲಿ, 'ಸಮವಸ್ತ್ರಗಳು ಕೇವಲ ಕರ್ತವ್ಯವನ್ನು ಪ್ರತಿನಿಧಿಸುವುದಿಲ್ಲ, ಅವು ನಮ್ಮನ್ನು ರಕ್ಷಿಸುವ ಮೌನ, ಜೀವಮಾನದ ಪ್ರತಿಜ್ಞೆಯನ್ನು ಪ್ರತಿನಿಧಿಸುತ್ತವೆ', ಎಂದು ಹೇಳಿದ್ದಾರೆ.

<><><>

**ಮಂಡ್ಯ ನಗರ, ಬನ್ನೂರು ರಸ್ತೆಯ** ಡಿ. ಎ. ಆರ್. ಕವಾಯತು ಮೈದಾನದಲ್ಲಿ, ಆಯೋಜಿತ, ಪೊಲೀಸ್ ಸಂಸ್ಮರಣಾ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡ, ಜಿಲ್ಲಾಧಿಕಾರಿ ಡಾಕ್ಟರ ಕುಮಾರ, ಹುತಾತ್ಮ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಗೌರವ ನಮನಗಳನ್ನು ಸಲ್ಲಿಸಿ, ಅವರ ತ್ಯಾಗ ಹಾಗೂ ಸೇವೆಯನ್ನು ಸ್ಮರಿಸಿದರು.

<><><>

**ಹುಬ್ಬಳ್ಳಿಯ ಸಿ.ಎ.ಆರ್. ಮೈದಾನದಲ್ಲಿ,** ಪೊಲೀಸ್ ಆಯುಕ್ತಾಲಯ ಹುಬ್ಬಳ್ಳಿ ಧಾರವಾಡ ನಗರ ವತಿಯಿಂದ, ಪೊಲೀಸ್ ಹುತಾತ್ಮರ ದಿನಾಚರಣೆ ಕಾರ್ಯಕ್ರಮ ಜರುಗಿತು. ಹುಬ್ಬಳ್ಳಿ ಧಾರವಾಡ ನಗರ ಪೊಲೀಸ್ ಆಯುಕ್ತ ಭೂಷಣ ಬೊರಸೆ, ಪೊಲೀಸರ ತ್ಯಾಗ ಹಾಗೂ ಬಲಿದಾನವನ್ನು ಸ್ಮರಿಸಿದರು. ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ, ಧಾರವಾಡ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶ ಎನ್.ವಿ. ವಿಜಯ, ದೇಶದ ಸುರಕ್ಷತೆ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸ ಇಲಾಖೆಯ ಕೊಡುಗೆ ಅತ್ಯಮೂಲ್ಯವಾಗಿದೆ ಎಂದರು.

<><><>

**ಎನ್.ವಿ ವಿಜಯ ಧ್ವನಿ– 34 ಸೆಕೆಂದುಗಳು**

<><><>

**ಕೋಲಾರ ನಗರದಲ್ಲಿ ಆಯೋಜಿತ,** ಪೊಲೀಸ್ ಹುತಾತ್ಮರ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡ, ಜಿಲ್ಲಾಧಿಕಾರಿ ಎಂ.ಆರ್ ರವಿಕುಮಾರ, ಹುತಾತ್ಮರ ಸ್ಮಾರಕಕ್ಕೆ ಪುಷ್ಪ ನಮನ ಸಲ್ಲಿಸಿದರು.

<><><>

**ಬಳ್ಳಾರಿ ಜಿಲ್ಲಾ ಸಶಸ್ತ್ರ ಪೊಲೀಸ್** ಪಡೆ ಮೈದಾನದಲ್ಲಿ ಆಯೋಜಿತ, ಸಂಸ್ಮರಣಾ ಕಾರ್ಯಕ್ರಮದಲ್ಲಿ, ಜಿಲ್ಲಾ ನ್ಯಾಯಾಧೀಶ ಸಿದ್ದಲಿಂಗ ಪ್ರಭು, ಜಿಲ್ಲಾ ಪಂಚಾಯ್ತಿ ಸಿ.ಇ.ಒ ಮಹಮ್ಮದ್ ಹಾರೀಸ್ ಸುಮೇರ್, ಪೊಲೀಸ್ ವರಿಷ್ಠಾಧಿಕಾರಿ ಡಾಕ್ಟರ ಸುಮನ್ ಡಿ. ಪನ್ನೇಕರ್ ಸೇರಿದಂತೆ ಗಣ್ಯರು, ಹುತಾತ್ಮರ ಸ್ಮಾರಕಕ್ಕೆ ಪುಷ್ಪ ನಮನ ಸಲ್ಲಿಸಿ, ಗೌರವ ಸಮರ್ಪಿಸಿದರು.

<><><>

**'ಇಂದು, ಆಜಾದ್ ಹಿಂದ್** ಫೌಜ್ ಸಂಸ್ಥಾಪನಾ ದಿನ'. ದೇಶದ ಸ್ವಾತಂತ್ರ್ಯಕ್ಕಾಗಿ, ನೇತಾಜಿ ಸುಭಾ ್ ಚಂದ್ರ ಬೋಸ್ ಅವರ ನೇತೃತ್ವದಲ್ಲಿ, ಹೋರಾಡಿದ, ಆಜಾದ್ ಹಿಂದ್ ಫೌಜ್‌ನ ವೀರ ಸೈನಿಕರ ತ್ಯಾಗವನ್ನು, ಕೇಂದ್ರ ಶಿಕ್ಷಣ ಖಾತೆ ಸಚಿವ, ಪ್ರಲ್ಹಾದ್ ಜೋಶಿ, ಸ್ಮರಿಸಿದ್ದು, ಗೌರವಪೂರ್ವಕ ನಮನಗಳನ್ನು ಸಲ್ಲಿಸಿದ್ದಾರೆ.

<><><>

**ವಿಶ್ವವಿಖ್ಯಾತ ಮೈಸೂರು ದಸರಾ**, ಜಂಬೂ ಸವಾರಿ ಇಂದು ಸಂಜೆ ಆಯೋಜಿತವಾಗಿದೆ. ಮೆರವಣಿಗೆ ಪೂರ್ವಭಾವಿಯಾಗಿ, ಈ ಮಧ್ಯಾಹ್ನ 1.36 ರಿಂದ 1.56 ರ ವರೆಗೆ, ಅರಮನೆ ಬಲರಾಮ ದ್ವಾರದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಾಂಪ್ರದಾಯಿಕ ನಂದಿ ಧ್ವಜ ಪೂಜೆ ನೆರವೇರಿಸಲಿದ್ದಾರೆ.

<><><>

**ಮೈಸೂರು ಅರಮನೆ ಆವರಣದಲ್ಲಿ**, ಸಂಜೆ 4 ರಿಂದ 4.25 ರ ನಡುವೆ, ಗಜಪಡೆ ನಾಯಕ ಪ್ರಶಾಂತ ಹೊರಲಿರುವ, 750 ಕಿಲೋ ಗ್ರಾಂ ತೂಕದ, ಚಿನ್ನದ ಅಂಬಾರಿಯಲ್ಲಿ ವಿರಾಜಮಾನ, ಚಾಮುಂಡೇಶ್ವರಿ ಮೂರ್ತಿಗೆ, ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಪುಷ್ಪಾರ್ಚನೆ ಮಾಡಲಿದ್ದಾರೆ.

<><><>

**ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ** ವಿಜಯದಶಮಿ ಜಂಬೂಸವಾರಿಗೆ ಗಜಪಡೆ ಸಜ್ಜಾಗಿದೆ. ಮೊದಲ ಬಾರಿಗೆ ಅಂಬಾರಿ ಹೊರಲಿರುವ, ಕ್ಯಾಪ್ಟನ್ ಪ್ರಶಾಂತ ಆನೆಯ ನೇತೃತ್ವದಲ್ಲಿ ಗಜಪಡೆ ಸಾಗಲಿದೆ. ಒಟ್ಟು 12 ಆನೆಗಳು ಜಂಬೂ ಸವಾರಿ, ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿವೆ.

<><><>

**ಇಂದು ರಾತ್ರಿ 7 ಗಂಟೆಗೆ, ಬನ್ನಿಮಂಟಪದ** ಮೈದಾನದಲ್ಲಿ, ಪಂಜಿನ ಕವಾಯತು ನಡೆಯಲಿದೆ. ರಾಜ್ಯಪಾಲರಾದ ಡಾಕ್ಟರ ಸುಧಾ ಯಾದವ್ ಭಾಗವಹಿಸಿ, ಗೌರವ ವಂದನೆ ಸ್ವೀಕರಿಸಲಿದ್ದಾರೆ.

<><><>

**ವಿಜಯದಶಮಿ ಅಂಗವಾಗಿ, ಇಂದು** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿವಿಧ ದೇವಾಲಯಗಳಲ್ಲಿ ವಿಶೇಷ ಅಲಂಕಾರ ಹಾಗೂ ಪೂಜಾ ಕಾರ್ಯಕ್ರಮಗಳು ಜರಗುತ್ತಿವೆ.

<><><>

**ಬಾಗಲಕೋಟೆ ಜಿಲ್ಲೆಯಲ್ಲಿ**, ವೇ-ಬ್ರಿಜ್ ಸ್ಥಾಪನೆಗೆ ಕ್ರಮ, ಹಾಗೂ ಕಬ್ಬಿನ ಬಾಕಿ ಹಣ ಪಾವತಿಸಲು, ಜಮಖಂಡಿ ಶುಗರ್ಸ್ ಕಾರ್ಖಾನೆಗೆ, ಸೂಚಿಸಲಾಗಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ, ವಿಜಯಾನಂದ ಕಾಶಪ್ಪನವರ, ತಿಳಿಸಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>